ಮಾಡುತ್ತೇವೆಂದು ಹೇಳಿದ್ದಾರೆ. ಹೆಚ್ಚು ಕಡಿಮೆ ಇದೇ ಪರಿಸ್ಥಿತಿ ಬೇರೆ ಬೇರೆ ಜಿಲ್ಲೆಗಳಲ್ಲಿರುತ್ತದೆ. ನಾನ್‌ಪ್ಲಾನ್‌ನಲ್ಲಿ ರಿಲೀಸ್ ಆಗದಿದ್ದರೆ ಯಾವ ಕಾಮಗಾರಿಗೆ ಧಕ್ಕೆ ಬರುತ್ತದೆ, ಅಪಾಯ ಬರುತ್ತದೆ ಎನ್ನುವುದನ್ನು ನಾನು ಒಪ್ಪಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ:– ಹಣ ಖರ್ಚು ಮಾಡಲಿಕ್ಕೆ ಸಮಯವನ್ನು ಮೂರು ತಿಂಗಳು ಕೊಡುತ್ತೀರಾ ? ಹೋದವರ್ಷ ಏಪ್ರಿಲ್, ಮೇ, ಜೂನ್ ತಿಂಗಳವರೆಗೆ ಎಕ್ಸ್‌ಟೆಂಡ್ ಮಾಡಿದ್ದರು. ಅದರ ಪ್ರಕಾರ ಈ ವರ್ಷ ಸಹ ಎಕ್ಸ್‌ಟೆಂಡ್ ಮಾಡುತ್ತೀರಾ ಎಂದು ಕೇಳುತ್ತೇನೆ.

ಅಧ್ಯಕ್ಷರು:– ಮಂತ್ರಿಗಳಿಗೆ ಉತ್ತರ ಹೇಳಲು ಈಗಾಗಲೇ 8 ನಿಮಿಷ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ:– 15–20 ಪರ್ಸೆಂಟ್ ಹಣ ಪಿಲ್‌ಓವರ್ ಆಗುತ್ತಿದೆ, ವರ್ಷೇ ವರ್ಷೇ ಆಗುತ್ತಿರುವುದು ತಮಗೆ ಗೊತ್ತಿದೆ. ಬಜೆಟ್‌ನಲ್ಲಿ ಏನು ಹಣ ಇದೆ ಅದನ್ನು ಸರ್ಕಾರ ಬಿಡುಗಡೆ ಮಾಡಿಯೇ ಮಾಡುತ್ತದೆ. ಅದರಲ್ಲಿ ಏನೂ ಅನುಮಾನವಿಲ್ಲ.

ಅಧ್ಯಕ್ಷರು:– ಮಾನ್ಯ ಶಿವಮೂರ್ತಿಯವರೇ ತಮ್ಮ ಪ್ರಶ್ನೆಗೆ ಮೂರು ವಾರ ಕಾಲಾವಕಾಶ ಕೇಳಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಪಡೆಯಬೇಕಾಗಿರುವುದರಿಂದ ಅದಕ್ಕೆ ಉತ್ತರ ಕೊಡಲು ಮೂರು ವಾರ ಕಾಲಾವಕಾಶ ಕೇಳಿ ಮಂತ್ರಿಗಳು ಪತ್ರ ಬರೆದಿದ್ದಾರೆ. ಆದ್ದರಿಂದ ತಮ್ಮ ಪ್ರಶ್ನೆಯನ್ನು ಮುಂದೂಡಲಾಗಿದೆ.

ಶ್ರೀ ಕೆ. ಶಿವಮೂರ್ತಿ:– ಅಷ್ಟರಲ್ಲಿ ಈ ಸದನ ಮುಗಿದಿರುತ್ತದೆ.

ಶ್ರೀಮತಿ ಮಲ್ಲಾಜಮ್ಮ:– ಮೂರು ವಾರಗಳವರೆಗೆ ಈ ಸದನ ನಡೆಯುತ್ತದೆಯೆ ?

ಅಧ್ಯಕ್ಷರು:– ನಡೆಯುತ್ತದೆ.

ಶ್ರೀ ಕೆ. ಶಿವಮೂರ್ತಿ:– ಈ ಸದನ ಮುಗಿಯುವುದರೊಳಗೆ ಉತ್ತರ ತರಿಸಿಕೊಡುವ ಭರವಸೆ ಕೊಟ್ಟರೆ ಸಾಕು.

ಅಧ್ಯಕ್ಷರು:– ನಾನು ಆದಷ್ಟು ಪ್ರಯತ್ನ ಮಾಡುತ್ತೇನೆ.

ತೀರ್ಥಹಳ್ಳಿ ತಾಲ್ಲೂಕು ಶಂಕರಹಳ್ಳಿ ಗ್ರಾಮದಲ್ಲಿ ಜವಹರ್ ರೋಜಗಾರ್ ಯೋಜನೆ

(2027): ಶ್ರೀ ಬಿ. ಸ್ವಾಮಿರಾವ್ (ಹೊಸನಗರ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ತೀರ್ಥಹಳ್ಳಿ ತಾಲ್ಲೂಕು ಅಗ್ರಹಾರ ಹೋಬಳಿ ಶಂಕರಹಳ್ಳಿ ಗ್ರಾಮದ ಸರ್ವೆ ನಂಬರು 17ರಲ್ಲಿರುವ ಮುಳ್ಳುಕೆರೆ ರಿಪೇರಿ ಬಾಬ್ತು ಜಿಲ್ಲಾಪರಿಷತ್‌ನವರು 1991-92 ರ ಜವಾಹರ್ ರೋಜಗಾರ್ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾತಿ ನೀಡಿರುವುದು ನಿಜವೇ;

ಆ. 1991–92 ರಲ್ಲಿ ಸದರಿ ಕಾಮಗಾರಿ ಬಗ್ಗೆ ಕೆಲಸ ನಿರ್ವಹಿಸದೆ ಹಣ ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಸದರಿ ಗ್ರಾಮಸ್ಥರು ತಾಲ್ಲೂಕು ಸಮಿತಿಗೆ ದೂರು ಕೊಟ್ಟಿದ್ದು ತನಿಖೆ ನಡೆಸಿದ್ದು ನಿಜವೇ ? ತಪ್ಪಿತಸ್ಥ ಅಧಿಕಾರಿಗಳ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ. ಹೌದು.

ಆ. ಮುಳ್ಳುಕೆರೆ ರಿಪೇರಿ ಕಾಮಗಾರಿಗೆ ಬದಲಾಗಿ ಶ್ರೀ ಗೋಪಾಲಕೃಷ್ಣ ಎಂಬುವರ ಜಮೀನಿನಲ್ಲಿ ಬೇರೆ ಕಡೆಯಿಂದ, ಅವರ ಜಮೀನಿಗೆ ಹರಿದು ಬರುವ ಮಳೆ ನೀರನ್ನು ತಪ್ಪಿಸಲು ಜಮೀನಿಗೆ ಕಾಲುವೆ ಕಾಮಗಾರಿಯನ್ನು ತೆಗೆದುಕೊಂಡು 3424 ರೂ.ಗಳನ್ನು ಖರ್ಚು ಮಾಡಿರುತ್ತಾರೆ.

ಇ. ದಿನಾಂಕ 25-11-92ರಂದು ಶಂಕರಹಳ್ಳಿ ಗ್ರಾಮಸ್ಥರು ತಾಲ್ಲೂಕು ಪಂಚಾಯ್ತಿ ಸಮಿತಿ ತೀರ್ಥಹಳ್ಳಿ, ಇವರಿಗೆ ದೂರು ಕೊಟ್ಟಿರುವುದು ನಿಜ. ಶಿವಮೊಗ್ಗ ಜಿಲ್ಲಾಪರಿಷತ್‌ನ ಮುಖ್ಯ ಕಾರ್ಯದರ್ಶಿಗಳು ಸಂಬಂಧಿಸಿದ ಮಂಡಲ್ ಪಂಚಾಯತ್ ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ಇವರುಗಳ ಮೇಲೆ ಕಾನೂನು ರೀತ್ಯ ಶಿಸ್ತಿನ ಕ್ರಮವನ್ನು ತೆಗೆದುಕೊಂಡಿರುತ್ತಾರೆ.

ಶ್ರೀ ಬಿ. ಸ್ವಾಮಿರಾವ್:– ಮಾನ್ಯ ಅಧ್ಯಕ್ಷರೇ, ತೀರ್ಥಹಳ್ಳಿ ತಾಲ್ಲೂಕು, ಅಗ್ರಹಾರ ಹೋಬಳಿ, ಸಂಕ್ರಳ್ಳಿ ಗ್ರಾಮದ ಸರ್ವೆ ನಂ. 17ರಲ್ಲಿ ಮುಳ್ಳುಕೆರೆ ರಿಪೇರಿಗಾಗಿ ಜಿಲ್ಲಾಪರಿಷತ್‌ನಿಂದ ಜವಹರ ರೋಜ್‌ಗಾರ್ ಯೋಜನೆಯಲ್ಲಿ ಹಣ ಮಂಜೂರು ಆಗಿದೆಯೆಂದು ಕೇಳಿದ್ದೇನೆ. ಅದನ್ನು ಒಪ್ಪಿಕೊಂಡಿದ್ದಾರೆ. ಆದರೆ ಕಾಮಗಾರಿ ಆಗಿದೆಯೆಂದು ಹೇಳಲಿಲ್ಲ. ಆ ಕಾಮಗಾರಿ ಆಗಿಲ್ಲ ಬೇರೆ ಕಾಮಗಾರಿಯಾಗಿದೆಯೆಂದು ಉತ್ತರ ಕೊಟ್ಟಿರುವುದು ಬಹಳ ವಿಚಿತ್ರವಾಗಿದೆ. ಜಮೀನಿಗೆ ನೀರು ಕೊಡಲಾಗಿದೆ. ಕೆರೆ ರಿಪೇರಿ ಮಾಡಬೇಕೆಂದು ಅಧಿಕಾರಿಗಳಿಗೆ ಅರ್ಜಿ ಕೊಟ್ಟು ಮಂಜೂರಿ ಆಗಿದ್ದರೆ ನೀರು ಜಾಸ್ತಿಯಿದೆಯೆಂದು ಹೇಳಿ ಗೋಪಾಲಕೃಷ್ಣ ಎಂಬುವರ ಜಮೀನಿಗೆ ಹೋಗುವುದನ್ನು ತಪ್ಪಿಸುವುದಕ್ಕೋಸ್ಕರ ರಿಪೇರಿ ಮಾಡಿದ್ದೇವೆಂದು ಹೇಳುತ್ತಾರೆ. ಈ ತರಹ ಕ್ರಮ ತೆಗೆದುಕೊಂಡಿರುವುದು ನಮಗೇನೂ ಗೊತ್ತಿಲ್ಲ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ತಿಳಿಯಬಯಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:– ಮಾನ್ಯ ಅಧ್ಯಕ್ಷರೆ, ಮುಳ್ಳುಕೆರೆ ರಿಪೇರಿಗೆ ಹಣ ಕೊಟ್ಟಿದ್ದು 3,424 ರೂಪಾಯಿ. ಇದು ಗೋಪಾಲಕೃಷ್ಣರವರ ಹೊಲದಲ್ಲಿ ಖರ್ಚಾಗಿದೆ ಎನ್ನುವ ಮಾತನ್ನು ನಾನೇ ಹೇಳಿದ್ದೇನೆ. ಇದು ಸರಿಯಲ್ಲವೆಂದು ಗೊತ್ತಾಗಿದೆ. ಇದರ ಬಗ್ಗೆ ಕಂಪ್ಲೆಂಟ್ ಬಂತು. ತೀರ್ಥಹಳ್ಳಿ ತಾಲ್ಲೂಕು ಸಮಿತಿಗೆ ದಿನಾಂಕ 25–11–92ರಲ್ಲಿ ಕಂಪ್ಲೆಂಟ್ ಬಂದಾಗ ಅದನ್ನು ವಿಚಾರಣೆ ನಡೆಸಿ ಮಂಡಲ ಪಂಚಾಯಿತಿ ಸೆಕ್ರೆಟರಿ ಮತ್ತು ಜೂನಿಯರ್ ಇಂಜಿನಿಯರ್ ಏನಿದ್ದಾರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಮುಖ್ಯ ಕಾರ್ಯದರ್ಶಿಯವರು ಮಾಡಿದ್ದಾರೆ. ಏನು ಕ್ರಮ ತೆಗೆದುಕೊಂಡಿದ್ದಾರೆ, ಏನಾಗಿದೆ ಎಂಬ ಮಾಹಿತಿ ನನ್ನಲ್ಲಿ ಇಲ್ಲ. ಕ್ರಮ ಅಂತೂ ತೆಗೆದುಕೊಂಡಿದ್ದಾರೆ. ಇದು ಸಣ್ಣ ವಿಷಯ ಇದ್ದರೂ ಕೂಡ ಅಲ್ಲಿ ಅಕ್ರಮ ನಡೆದಿರುವುದರಿಂದ ಈ ರೀತಿ ಚೀಫ್ ಸೆಕ್ರೆಟರಿಯವರಿಗೆ ಅನಿಸಿರುವುದರಿಂದ, ಅವರು ಮಂಡಲ ಪಂಚಾಯತ್ ಸೆಕ್ರೆಟರಿ ಮತ್ತು ಜೂನಿಯರ್ ಇಂಜಿಯನಿಯರ್ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಸ್ವಾಮಿರಾವ್:– ಇದು ಸಣ್ಣ ಮೊತ್ತದ ಹಣ ಆಗಿದ್ದರೂ ಕೂಡ ರೋಜಗಾರ್‌ನಲ್ಲಿ ಬರತಕ್ಕಂಥ ಹಣ ಗ್ರಾಮಾಂತರ ಪ್ರದೇಶಗಳಿಗೆ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಸಾಮಾನ್ಯವಾಗಿ ಇಂತಹ ಹಣದೊಳಗೆ ಇಂಜಿನಿಯರುಗಳು, ಜೂನಿಯರ್ ಇಂಜಿನಿಯರುಗಳು ಎಲ್ಲ ಸೇರಿ ಕಾಮಗಾರಿಯನ್ನು ಟೇಬಲ್ ಮೇಲೆ ಮಾಡಿರುತ್ತಾರೆ. ನೀರಾವರಿ ಕಾಮಗಾರಿ ಇರಬಹುದು, ಬೇರೆ ಯಾವುದೇ ಕಾಮಗಾರಿ ಇರಬಹುದು, ಭೂಮಿ ಮೇಲೆ ಮಾಡುವುದನ್ನು ಅವರು ಟೇಬಲ್ ಮೇಲೆ ಮಾಡಿರುತ್ತಾರೆ. ಅದಕ್ಕೋಸ್ಕರ ಇಂತಹ ಒಂದೆರಡು ಪ್ರಕರಣಗಳಲ್ಲಿ ನೇರವಾಗಿ ಸಿಕ್ಕಿದುದಾಗಿ ಕ್ರಮ

ತೆಗೆದುಕೊಂಡರೆ ಮುಂದೆ ಕೊಡತಕ್ಕಂಥ ದುಡ್ಡು ಸದುಪಯೋಗವಾಗುತ್ತದೆ. ಆವರ ಮೇಲೆ ಶೀಘ್ರ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಈ ಸದನದ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:– ಆದಕ್ಕೋಸ್ಕರ ಈಗ ಇರತಕ್ಕಂಥ ಕಾನೂನಿನಲ್ಲಿ ಸ್ವಲ್ಪ ಬಿಗಿ ಮಾಡಬೇಕಾಗಿದೆ ಮತ್ತು ಇಂತಹ ಅಕ್ರಮ ನಡೆದರೆ ಇದಕ್ಕೆ ಸಾಕಷ್ಟು ಅಧಿಕಾರ ಸರ್ಕಾರಕ್ಕೂ ಕೂಡ ಇರಬೇಕಾಗುತ್ತದೆ. ಈ ರೀತಿ ಅಕ್ರಮಗಳನ್ನು ತಪ್ಪಿಸುವುದಕ್ಕೆ ಕೂಡ ವ್ಯವಸ್ಥೆ ಸರಿಯಾಗಿ ಮಾಡಬೇಕಾಗುತ್ತದೆ. ಪಂಚಾಯತ್ ರಾಜ್ ಬಿಲ್ ಏನಿದೆ, ಆದರಲ್ಲಿ ಇರುವ ಕಾನೂನಿನ ದೋಷಗಳನ್ನು ನಾವು ನಮ್ಮ ಹೊಸ ಬಿಲ್ಲಿನಲ್ಲಿ ಸರಿಪಡಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ.

ರಾಜ್ಯದಲ್ಲಿನ ಗ್ರಾಮ ಸಹಾಯಕರು

(2101): ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಗ್ರಾಮ ಸಹಾಯಕರು ಸೇವೆಯಲ್ಲಿರುವವರ ಸಂಖ್ಯೆ ಎಷ್ಟು;

ಆ. ಆವರಿಗೆ ತಿಂಗಳೊಂದಕ್ಕೆ ನೀಡುವ ಸಂಬಳದ ಮೊತ್ತವೆಷ್ಟು;

ಇ. ಆವರನ್ನು 'ಡಿ' ದರ್ಜೆ ನೌಕರರೆಂದು ಪರಿಗಣಿಸಲು ಸರ್ಕಾರವು ನಿರ್ಧರಿಸಿದೆಯೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿಗಳು):–

ಅ. 10450 ಮಿತ ವೇತನದ ಹುದ್ದೆಗಳು

ಆ. ನಿಗದಿತ ಸಂಭಾವನೆ ಮಾಸಿಕ ರೂ. 600.00

ಇ. ಇಲ್ಲ

ಶ್ರೀ ಎಂ. ಕೆ. ಪಟ್ಟಣಶೆಟ್ಟಿ:– ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಗ್ರಾಮ ಸಹಾಯಕರುಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 10,450 ಎಂದು ಹೇಳಿದ್ದಾರೆ. ಆವರ ಸಂಬಳ ಎಷ್ಟು ಎಂದು ಕೇಳಿದರೆ, ಮಾಸಿಕವಾಗಿ 600 ರೂ.ಗಳೆಂದು ಹೇಳಿದ್ದಾರೆ. ಆವರನ್ನು 'ಡಿ' ದರ್ಜೆಯ ನೌಕರರೆಂದು ಸರ್ಕಾರವು ಪರಿಗಣಿಸುವುದೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಗ್ರಾಮ ಸಹಾಯಕರು ಕಂದಾಯ ಇಲಾಖೆಯಲ್ಲಿ ಒಂದು ಪ್ರಮುಖವಾದ ಅಂಗ. ಅಂತಹವರಿಗೆ ಕೊಡುವ ಸಂಬಳ ಬಹಳ ಕಡಿಮೆಯಾಗಿದೆ. ಬೆಲೆಯೇರಿಕೆಯ ತುಟ್ಟಿ ದಿವಸಗಳಲ್ಲಿ ಆವರಿಗೆ ಆರುನೂರು ರೂಪಾಯಿ ಸಂಬಳ ಎಂದರೆ ಬಹಳ ಕಡಿಮೆಯಾಗುತ್ತದೆ. ಕನಿಷ್ಪಪಕ್ಷ ಆವರಿಗೆ ಒಂದು ಸಾವಿರವಾದರೂ ಸಂಬಳ ಕೊಡಬೇಕೆಂದು ಕೇಳುತ್ತೇನೆ. ಹಾಗೆಯೇ ಆವರಿಗೆ ನೌಕರಿ ಭದ್ರತೆ ಇಲ್ಲದಿದ್ದರೆ ಆವರ ಜೀವನಕ್ಕೆ ಬಹಳಷ್ಟು ತೊಂದರೆಯಾಗುತ್ತದೆ. ಆವರನ್ನು ಕನಿಷ್ಪ 'ಡಿ' ದರ್ಜೆ ನೌಕರರೆಂದು ಪರಿಗಣಿಸಬೇಕು ಮತ್ತು ಈ ದಿಸೆಯಲ್ಲಿ ತಾವು ಯೋಚನೆ ಮಾಡಬೇಕೆಂದು ಕೇಳಿಕೊಂಡು, ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರೆಂದು ಆಶಯ ಮಾಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:– ಆವರನ್ನು 'ಡಿ' ದರ್ಜೆಯಾಗಿ ಮಾಡಿದರೆ 18 ಕೋಟಿ ರೂಪಾಯಿ ನಷ್ಟವಾಗುತ್ತದೆ. ತಿಂಗಳಿಗೆ ಆರುನೂರು ರೂಪಾಯಿ ಸಂಬಳ ಕೊಡುವುದರಿಂದ 7 ಕೋಟಿ ಖರ್ಚಾಗುತ್ತದೆ. 11 ಕೋಟಿ ಫೈನಾನ್ಷಿಯಲ್ ಇಂಪ್ಲಿಕೇಶನ್ ಆಗುತ್ತದೆ. ಇದು ಮೂರನೆಯ ವೇತನಾ ಆಯೋಗದ ಮುಂದೆ ಹೋಗಿ ಆವರು ಶಿಫಾರಸ್ಸು ಮಾಡಿ ಕಳುಹಿಸಿದ್ದರು. ಕ್ಯಾಬಿನೆಟ್ ಸಬ್